

بسم اللهِ الرّحمٰنِ الرّحيم

# ಖಾದಿಯಾನ್ ಜಲ್ಸಾ ಸಾಲಾನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 25–12–2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈಗ ಖಾದಿಯಾನ್‌ನಲ್ಲಿ ಜಲ್ಸಾ ಸಾಲಾನದ ದಿನಗಳಾಗಿವೆ. ಇನ್‌ಶಾ–ಅಲ್ಲಾಹ್, ನಾಳೆ ಖಾದಿಯಾನಿನ ಜಲ್ಸಾ ಸಾಲಾನ ಪ್ರಾರಂಭವಾಗಲಿದೆ. ಖಾದಿಯಾನಿನ ಜಲ್ಸಾ ಸಾಲಾನ ಮಹತ್ವಪೂರ್ಣವಾದುದು. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಊರಿನಲ್ಲಿ ಈ ಜಲ್ಸ ಜರಗುತ್ತಿದೆ. ಅವರು ಅಲ್ಲಾಹನ ಅನುಮತಿಯಿಂದ ಜಲ್ಸವನ್ನು ಪ್ರಾರಂಭ ಮಾಡಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವಿಧ ಭಾಷಣಗಳಲ್ಲೂ ಖುತ್‌ಬಗಳಲ್ಲೂ ಜಲ್ಸಾ ಸಾಲಾನಕ್ಕೆ ಸಂಬಂಧಿಸಿ ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದ ಬಗ್ಗೆ ಮತ್ತು ಜಮಾಅತಿನ ಪ್ರಾರಂಭದ ಸ್ಥಿತಿಯ ಬಗ್ಗೆ ವಿವರಿಸಿರುವರು. ಈಗ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಆ ಕಾಲದ ಜಲ್ಸದ ಬಗ್ಗೆ ವಿವರಿಸಿದವುಗಳಲ್ಲಿ ಕೆಲವನ್ನು ನಿಮ್ಮ ಮುಂದೆ ಇರಿಸುವೆನು. ಆರಂಭ ಕಾಲದಲ್ಲಿ ನಡೆದ ಒಂದು ಜಲ್ಸದ ಬಗ್ಗೆ ತನ್ನ ಬಾಲ್ಯ ಕಾಲದ ಸ್ಮರಣೆಯನ್ನು ವಿವರಿಸುತ್ತಾ 1936ರಲ್ಲಿ ಒಂದು ಭಾಷಣದಲ್ಲಿ ಹೀಗೆ ಹೇಳಿದರು:

ಆಗ ನನ್ನ ಪ್ರಾಯ ಏಳೆಂಟು ವರ್ಷಗಳಾಗಿರಬಹುದು. ಅಲ್ಲಿ ಜಮಾಯಿಸಿದವರ ಸುತ್ತುಮುತ್ತು ನಾನು ಓಡಾಡುತ್ತಿದ್ದೆನು. ಆ ಕಾಲದಲ್ಲಿ ಅಲ್ಲಿ ಅಷ್ಟು ಜನ ಜಮಾಯಿಸುವುದು ನನಗೆ ಆಶ್ಚರ್ಯಕರವಾಗಿತ್ತು. ಒಂದು ಹಾಸುಗಂಬಳಿಯನ್ನು ನೆಲದಲ್ಲಿ ಹಾಸಿದ್ದರು. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕುಳಿತಿದ್ದರು. ಅವರ ಸುತ್ತುಮುತ್ತಲು ಜನರು ಜಲ್ಸಾ ಸಾಲಾನಕ್ಕೋಸ್ಕರ ಜಮಾಯಿಸಿದ್ದರು. ಅವರ ಸಂಖ್ಯೆ ನೂರೈವತ್ತು – ಇನ್ನೂರು ಇರಬಹುದು. ಮಕ್ಕಳನ್ನು ಸೇರಿಸಿ ಒಟ್ಟು ಸಂಖ್ಯೆ ಇನ್ನೂರೈವತ್ತು ಇದ್ದಿರಬಹುದು. ಅವರ ಹೆಸರಿನ ಪಟ್ಟಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಕಟಿಸಿದ್ದರು. ಆ ಹಾಸುಗಂಬಳಿಯನ್ನು ಎರಡು ಮೂರು ಸಾರಿ ಸ್ಥಳ ಬದಲಾಯಿಸಿ ಹಾಸಲಾಯಿತೆಂದು ಸಹ ನನಗೆ ನೆನಪಿದೆ.

ಈಗ ಖಾದಿಯಾನಿಗೆ ಜಲ್ಸಾ ಸಾಲಾನದಲ್ಲಿ ಭಾಗವಹಿಸಲು ಹೋದವರಿಗೆ ಅಂದಿನ ಕಾಲದ ಸ್ಥಿತಿಯನ್ನು ಅಂದಾಜು ಮಾಡಲು ಪ್ರಾಯಶಃ ಸಾಧ್ಯವಾಗಲಾರದು. ಈಗ ಅಲ್ಲಾಹನ ಅನುಗ್ರಹದಿಂದ ಒಂದು ವಿಶಾಲ ಜಲ್ಸಗಾಹ್ ನಮಗೆ ಲಭ್ಯವಾಗಿದೆ. ಅದರ ಸುತ್ತಲೂ ಗೋಡೆ ನಿರ್ಮಿಸಲಾಗಿದೆ. ಅಲ್ಲಿ ಹೆಚ್ಚು ಸೌಲಭ್ಯಗಳನ್ನು ಒದಗಿಸಲು ಪ್ರಯತ್ನ ಮಾಡಲಾಗುತ್ತಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು 1936ರಲ್ಲಿ ಮೇಲೆ ವಿವರಿಸಿದ ರೀತಿಯಲ್ಲಿ ಜಲ್ಸ ಸಾಲಾನದ ವ್ಯವಸ್ಥೆಯಾದ ನಂತರ ವಿಭಜನೆಯ ಕಾಲದವರೆಗೆ ಅದು ಇನ್ನಷ್ಟು ವಿಶಾಲವಾಗಿ ಮುಂದುವರಿಯಿತು. ವಿಭಜನೆಯ ನಂತರ ಮತ್ತೆ ಖಾದಿಯಾನಿನ ಸ್ಥಿತಿ ಹೇಗಾಯಿತೆಂದರೆ **ದಾರುಲ್ ಮಸೀಹ್** ಮತ್ತು ಸುತ್ತುಮುತ್ತಲಿನ ಕೆಲವು ಮನೆಗಳಲ್ಲಿ ಅಹ್ಮದಿಯರು ಸೀಮಿತರಾದರು. ಕೆಲವು ನೂರು ಜನರನ್ನು ಹೊರತು ಪಡಿಸಿ ಎಲ್ಲರೂ ಖಾದಿಯಾನಿನಿಂದ ವಲಸೆ ಹೋದರು. ಅಲ್ಲಿ ಉಳಿದಿದ್ದ ಅಹ್ಮದಿಯರು ಬಹಳ ಬಲಹೀನರಾಗಿದ್ದರು. ಆದರೆ ಈಗ ಪುನಃ ಅಲ್ಲಾಹನ ಅನುಗ್ರಹದಿಂದ ಖಾದಿಯಾನಿನಲ್ಲಿ ಬಹಳ ವಿಶಾಲತೆ ಉಂಟಾಗಿದೆ. ಚರಿತ್ರೆಯ ಹಾಳೆಗಳಲ್ಲಿ ಕಣ್ಣೋಡಿಸಿದರೆ ಅಲ್ಲಾಹನ ಅನುಗ್ರಹಗಳ ಸುರಿಮಳೆಯನ್ನು ಕಾಣಬಹುದಾಗಿದೆ. ಈಗ ರಬ್ವದ ನಿವಾಸಿಗಳು ಚಿಂತಾಕುಲರಾಗಿರಬಹುದು. ಆದರೆ ಸ್ಥಿತಿಗಳು ಯಾವಾಗಲೂ ಒಂದೇ ರೀತಿ ಇರಲಾರದು ಎಂದು ಅವರು ನೆನಪಿನಲ್ಲಿಡಬೇಕು. ಇನ್‌ಶಾಅಲ್ಲಾಹ್– ಅಲ್ಲಿ ಸಹ ಪರಿಸ್ಥಿತಿ ಬದಲಾವಣೆ ಹೊಂದುವುದು. ಅಲ್ಲಿ ಸಹ ಜಮಾಅತ್ ಹೊಳಪುಳ್ಳದಾಗುವುದು. ಆದುದರಿಂದ ರಬ್ವದ ನಿವಾಸಿಗಳು ಪ್ರಾರ್ಥನೆ ಕಡೆಗೆ ಹೆಚ್ಚು ಶ್ರದ್ಧೆ ನೀಡಬೇಕು. ಪಾಕಿಸ್ಥಾನದಲ್ಲಿರುವ ಎಲ್ಲ ಅಹ್ಮದಿಯರು ಪ್ರಾರ್ಥನೆ ಕಡೆಗೆ ಹೆಚ್ಚು ಶ್ರದ್ಧೆ ನೀಡಬೇಕು. ಅಲ್ಲಾಹನು ಹೇಳುತ್ತಾನೆ: **ವಲಾ ತಹಿನೂ ವಲಾ ತಹ್‌ಝನೂ ವ ಅನ್‌ತುಮುಲ್ ಅಅ್‌ಲೌನ ಇನ್ ಕುನ್‌ತುಮ್ ಮೂಮಿನೀನ್.** ನೀವು ಬಲಹೀನತೆ ತೋರ್ಪಡಿಸಬೇಡಿರಿ, ದುಃಖಿಸಬೇಡಿರಿ. ನೀವು ಸತ್ಯವಿಶ್ವಾಸಿಗಳಾಗಿದ್ದರೆ ನೀವೇ ಜಯಶಾಲಿಗಳಾಗುವಿರಿ. ಇಲ್ಲಿ ಅಲ್ಲಾಹನು ವಿಧಿಸಿರುವ ಶರತ್ತೇನೆಂದರೆ ನೀವು ಸತ್ಯ ವಿಶ್ವಾಸಿಗಳಾಗಬೇಕೆಂದು. ವಿಶ್ವಾಸದಲ್ಲಿ ದೃಢತೆ ಮತ್ತು ಹೆಚ್ಚು ಹೆಚ್ಚಾಗಿ ಪ್ರಾರ್ಥನೆ ಮಾಡುವುದು ಅಲ್ಲಾಹನ ಅನುಗ್ರಹಗಳನ್ನು ಆಕರ್ಷಿಸುತ್ತದೆ. ಮತ್ತು ಪರಿಸ್ಥಿತಿಯನ್ನು ಬದಲಾಯಿಸುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನೂರ ಇಪ್ಪತ್ತೈದು ಅಥವಾ ನೂರ ಮೂವತ್ತು ಕೋಟಿ ಜನರು ವಾಸಿಸುವ ಈ ಲೋಕದಲ್ಲಿ (ಇದು ಆ ಕಾಲದ ಲೆಕ್ಕವಾಗಿದೆ) ಇನ್ನೂರು ಇನ್ನೂರೈವತ್ತು ಜನರು ಜಮಾಯಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯನ್ನು ಶತ್ರುಗಳು ತಗ್ಗಿಸಲು ಪ್ರಯತ್ನಿಸುತ್ತಿದ್ದಾರೆ. ನಾವು ಅವರನ್ನು ಹಾಗೆ ಮಾಡಲು ಬಿಡಲಾರೆವು. ನಾವು ಅದನ್ನು ಎತ್ತರವಾಗಿ ಹಾರಿಸುವೆವು. ನಾವು ಅದಕ್ಕೋಸ್ಕರ ನಮ್ಮ ಜೀವವನ್ನು ಬಲಿದಾನ ಮಾಡಲು ಸಿದ್ಧರಾಗಿದ್ದೇವೆ. ನಾವು ಅದನ್ನು ತಗ್ಗಿಸಿಡಲು ಬಿಡಲಾರೆವು ಎಂದು ಅವರು ನಿರ್ಧರಿಸಿರುವರು. ಒಂದು ನೂರ ಇಪ್ಪತ್ತೈದು ಕೋಟಿ ಜನರ ಸಮುದ್ರದ ಎದುರಿಗೆ ಇನ್ನೂರು ಇನ್ನೂರೈವತ್ತು ಬಲಹೀನ ಜನರು ತಮ್ಮ ಜೀವಾರ್ಪಣೆ ಮಾಡಲು ಆಗಮಿಸಿದ್ದರು. 1895–96ರ ಆ ಕಾಲದಲ್ಲಿ ಅವರ ಮುಖದಲ್ಲಿ ಬದ್ರ್ ಯುದ್ಧದಲ್ಲಿ ಭಾಗವಹಿಸಿದ ಸಹಾಬರ ಮುಖದಲ್ಲಿ ಏನು ಬರೆಯಲಾಗಿತ್ತೋ ಅದೇ ರೀತಿಯಲ್ಲಿ ಇವರ ಮುಖಗಳಲ್ಲೂ ಬರೆಯಲಾಗಿತ್ತು. ಬದ್ರ್ ಯುದ್ಧದಲ್ಲಿ ಭಾಗವಹಿಸಿದ ಆ ಸಹಾಬರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ರೊಂದಿಗೆ ಹೇಳಿದ್ದರು: ಓ ಅಲ್ಲಾಹನ ಸಂದೇಶವಾಹಕರೇ, ನಿಸ್ಸಂಶಯ ವಾಗಿಯೂ ನಾವು ಬಲಹೀನರಾಗಿದ್ದೇವೆ. ಶತ್ರುಗಳು ಶಕ್ತಿ ಶಾಲಿಗಳಾಗಿದ್ದಾರೆ. ಆದರೆ ನಮ್ಮ ಶವದ ಮೇಲೆ ತುಳಿದುಕೊಂಡು ಹೊರತು ಅವರು ನಿಮ್ಮ ಸಮೀಪಕ್ಕೆ ತಲಪಲಾರರು. ಅವರು ಮನುಷ್ಯರಲ್ಲ, ಜೀವಂತ ಮೃತ್ಯುಗಳೆಂದು ಅವರ ಮುಖಭಾವ ಪ್ರಕಟಿಸುತ್ತಿತ್ತು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವವನ್ನು ಕಾಪಾಡಲು ಮತ್ತು ಇಸ್ಲಾಮ್ ಧರ್ಮವನ್ನು ಸ್ಥಾಪಿಸಲು ಒಂದು ಅಂತಿಮ ಹೋರಾಟಕ್ಕೋಸ್ಕರ ಜಮಾಯಿಸಿದ್ದರು. ನೋಡುತ್ತಿದ್ದವರು ನಗುತ್ತಿದ್ದರು ಮತ್ತು ಪರಿಹಾಸ ಮಾಡುತ್ತಾ ಇದ್ದರು. 'ಈ ಜನರಿಗೆ ಏನು ಮಾಡಲು ಸಾಧ್ಯ' ಎಂದು

ಆಶ್ಚರ್ಯಪಡುತ್ತಿದ್ದರು. ಯಥಾರ್ಥದಲ್ಲಿ ಇದೊಂದು ತೀವ್ರ ಪ್ರೇಮವಾಗಿದೆ. ಅದು ಮನುಷ್ಯನ ಬುದ್ಧಿಯ ಮೇಲೆ ಪರದೆ ಹಾಕುತ್ತದೆ ಮತ್ತು ಮನುಷ್ಯನು ಅಂತಹ ಬಲಿದಾನ ನೀಡುವಂತೆ ಮಾಡುತ್ತದೆ. ಈ ಪ್ರೇಮ ಹೇಗಿರುತ್ತದೆ ಎಂದರೆ ಅದರ ಬಗ್ಗೆ ಊಹಿಸಲು ಸಹ ಸಾಧ್ಯವಿಲ್ಲ. ಅಲ್ಲಿ ಜಮಾಯಿಸಿದ ಇನ್ನೂರು ಇನ್ನೂರೈವತ್ತು ಜನರ ಹೃದಯದಿಂದ ಹೊರಗೆ ಬಂದ ರಕ್ತ ಅಲ್ಲಾಹನ ಅರ್ಶ್‌ನ ಮುಂದೆ ದೂರು ನೀಡಿತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು 1936ರಲ್ಲಿ ತನ್ನ ಮುಂದೆ ಕುಳಿತಿದ್ದ ಕೆಲವು ಸಾವಿರ ಜನರನ್ನು ಸಂಬೋಧಿಸಿ ಹೇಳಿದರು: ಇನ್ನೂರು ಇನ್ನೂರೈವತ್ತು ಜನರು ಜಮಾಯಿಸಿ ಅಲ್ಲಾಹನ ಮುಂದೆ ಗೋಳಿಟ್ಟುದರ ಪರಿಣಾಮ ಈಗ ನೀವು ನೋಡುತ್ತಿರುವಿರಿ ಎಂದು. ಆದರೆ ಈಗ, ನಾನು ಹೇಳಿದ ಹಾಗೆ ಖಾದಿಯಾನಿನಲ್ಲಿ ಜಲ್ಸ ನಡೆಸುವ ಜಲ್ಸಗಾಹ್ ಇನ್ನಷ್ಟು ವಿಶಾಲಗೊಂಡಿದೆ. ಜಲ್ಸದಲ್ಲಿ ಜಮಾಯಿಸಿರುವ ಎಲ್ಲಾ ಪುರುಷರೊಂದಿಗೂ ಮಹಿಳೆಯರೊಂದಿಗೂ ನಾನು ಹೇಳಲು ಬಯಸುತ್ತೇನೆ, ಈಗ ಈ ವಿಶಾಲವಾದ ಸ್ಥಳದಲ್ಲಿ ಜಲ್ಸ ಜರಗುತ್ತಿದೆ. ಅನೇಕ ಭಾಷೆಗಳಲ್ಲಿ ಶಬ್ದಗಳನ್ನು ತಲಪಿಸಲಾಗುತ್ತಿದೆ. ಇಲ್ಲಿ ವಿವಿಧ ಜನಾಂಗಗಳ ಜನರು ಜಮಾಯಿಸಿದ್ದಾರೆ. ತಮ್ಮ ಮೂಲಭೂತ ಹಕ್ಕುಗಳಿಂದ ವಂಚಿತರಾದ ಪಾಕಿಸ್ತಾನದ ಅಹ್ಮದಿಯರೂ ಇಲ್ಲಿದ್ದಾರೆ. ಇಲ್ಲಿ ಸೇರಿದ ಜನರೆಲ್ಲರೂ ಸತ್ಯವಿಶ್ವಾಸದಲ್ಲೂ ನಿಷ್ಠೆಯಲ್ಲೂ ವರ್ಧಿಸಬೇಕು. ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪ್ರಸ್ತಾಪಿಸಿದ ಇನ್ನೂರು ಜನರು ಹೊಂದಿದಂತಹ ಸಂಬಂಧ ನೀವು ಅಲ್ಲಾಹನೊಂದಿಗೆ ಸ್ಥಾಪಿಸಿರಿ. ಆ ಇನ್ನೂರು ಇನ್ನೂರೈವತ್ತು ಬೀಜಗಳು ತಮ್ಮ ಪ್ರಭಾವ ತೋರಿಸಿದ್ದಾರೆ. ಈಗ ನಮ್ಮ ಹೊಣೆಗಾರಿಕೆಯು ಈ ಕೆಲಸವನ್ನು ಮುಂದುವರಿಸಲು ನಮ್ಮ ವಿಶ್ವಾಸವನ್ನು ವರ್ಧಿಸುವುದಾಗಿದೆ. ಅಲ್ಲಾಹನು ವಾಗ್ದಾನ ನೀಡಿದ ಹಾಗೆ ನಾವು ಇನ್‌ಶಾಅಲ್ಲಾಹ್ ಜಯಶಾಲಿಗಳಾಗುವೆವು.

ಈಗ ಲೋಕದ ಜನಸಂಖ್ಯೆ 730 ಕೋಟಿ ಎಂದು ಹೇಳಲಾಗುತ್ತಿದೆ. ನಮ್ಮ ಜನಸಂಖ್ಯೆ ಲೋಕದ ಜನಸಂಖ್ಯೆಗೆ ಹೋಲಿಸಿದರೆ ಮತ್ತು ನಮ್ಮ ಸಾಧನ ಸಂಪತ್ತುಗಳ ದೃಷ್ಟಿಯಲ್ಲಿ ಬಹಳ ಸಾಮಾನ್ಯವಾಗಿದೆ. ಆದರೆ ನಮ್ಮ ತಂದೆ ತಾತಂದಿರು ಮಾಡಿದ ಕೆಲಸವನ್ನೇ ನಾವು ಸಹ ಮುಂದುವರಿಸಬೇಕಾಗಿದೆ. ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾದುದೇನೆಂದರೆ ನಮ್ಮ ಉದ್ದೇಶ ಲಕ್ಷ್ಯ ಬಹಳ ದೊಡ್ಡದಾಗಿದೆ. ಅದನ್ನು ನಾವು ಗಳಿಸಲೇಬೇಕಾಗಿದೆ. ಖಾದಿಯಾನಿನಲ್ಲಿ ಜಮಾಯಿಸಿರುವ ಎಲ್ಲರೂ ನೆನಪಿಡಬೇಕಾದುದೇನೆಂದರೆ ಈ ದಿನಗಳಲ್ಲಿ ಬಹಳ ಪ್ರಾರ್ಥನೆಗಳನ್ನು ಮಾಡಿರಿ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸುಂದರ ದೃಷ್ಟಾಂತಗಳು ಸಾವಿರಾರು ಇವೆ ಮತ್ತು ಅವುಗಳಿಗೆ ಸಾಕ್ಷ್ಯಗಳು ಅಸಂಖ್ಯಾತವಾಗಿವೆ. ಒಂದು ಇಲ್‌ಹಾಮ್ ಹೀಗಿದೆ: **ಯಅ್‌ತೀಕ ಮಿನ್‌ಕುಲ್ಲಿ ಫಜ್ಜಿನ್ ಅಮೀಖ್, ವ ಯಅ್‌ತೂನ ಮಿನ್‌ಕುಲ್ಲಿ ಫಜ್ಜಿನ್ ಅಮೀಖ್.** ದೂರ ದೂರ ಸ್ಥಳಗಳಿಂದ ನಿನ್ನ ಸಮೀಪಕ್ಕೆ ಜನರು ಆಗಮಿಸುವರು. ದೂರ ದೂರ ಸ್ಥಳಗಳಿಂದ ನಿನ್ನ ಬಳಿಗೆ ಪಾರಿತೋಷಕಗಳು ತರಲಾಗುವುವು. ನಿನ್ನ ಮೂಲಕ ಅತಿಥಿ ಸತ್ಕಾರದ ವ್ಯವಸ್ಥೆ ಮಾಡಲಾಗುವುದು. ಜನರು ಬಹಳ ಸಂಖ್ಯೆಯಲ್ಲಿ ಆಗಮಿಸುವ ಕಾರಣ ಮಾರ್ಗಗಳು ಸವೆದು ಹೋಗುವುವು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಈ ಇಲ್‌ಹಾಮ್ ಬಹಳ ವೈಭವಶಾಲಿಯಾಗಿದೆ. ಈ ಇಲ್‌ಹಾಮ್ ಅವತೀರ್ಣವಾದ ಕಾಲದ ಸ್ಥಿತಿ ಹೇಗಿತ್ತೆಂದು ಕಣ್ಣಾರೆ ಕಂಡ ಜನರು ಈಗಲೂ ಜೀವಿಸಿದ್ದಾರೆ. ನನ್ನ ಪ್ರಾಯ ಚಿಕ್ಕದಾಗಿದ್ದರೂ ಆಗಿನ ಕಾಲದ ಸ್ಥಿತಿ ಈಗಲೂ ನನಗೆ ನೆನಪಿದೆ. ಈಗ ಮದ್‌ರಸ ಇರುವ ಸ್ಥಳದಲ್ಲಿ ಕೆಸರಿನ ಹೊಂಡವಿತ್ತು. ಅಲ್ಲಿ ಕೊಳಕು ವಸ್ತುಗಳ ಗೊಂಪೆಯಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಯಾರಿಗೂ ತಿಳಿದಿರಲಿಲ್ಲ. ಅಂತಹ ಕಾಲದಲ್ಲಿ ಅಲ್ಲಾಹನು ವಾಗ್ದಾನ ಮಾಡಿದನು: ನಿನ್ನ ಬಳಿಗೆ ಜನರು ದೂರ ದೂರದಿಂದ ಆಗಮಿಸುವರು, ದೂರ ದೂರಗಳಿಂದ ನಿನ್ನ ಬಳಿಗೆ ಪಾರಿತೋಷಿಕಗಳು ತರಲ್ಪಡುವುವು ಎಂದು. ಇದು ಯೋಚಿಸಬೇಕಾದ ವಿಷಯವಾಗಿದೆ. ಈಗ ಖಾದಿಯಾನಿನ ದೃಶ್ಯಗಳನ್ನು ನಾವು ಕಾಣುತ್ತಿದ್ದೇವೆ. ಲೋಕದ ಇಪ್ಪತ್ತು ಇಪ್ಪತ್ತೈದು ದೇಶಗಳಿಂದ ಜನರು ಅಲ್ಲಿಗೆ ತಲಪಿದ್ದಾರೆ. ಖಾದಿಯಾನ್‌ನಲ್ಲಿ ಹೊಸ ಕಟ್ಟಡಗಳು ಸಹ ಅಲ್ಲಾಹನ ಅನುಗ್ರಹದಿಂದ ನಿರ್ಮಿಸಲ್ಪಡುತ್ತಾ ಇವೆ.

ಜಲ್ಸ ಸಾಲಾನದ ಸಂದರ್ಭದಲ್ಲಿ ಅತಿಥಿಗಳಿಗೆ ಆಹಾರ ನೀಡುವುದಕ್ಕೆ ಸಂಬಂಧಿಸಿ ಒಂದು ಇಲ್‌ಹಾಮ್ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದ ಕೊನೆಯ ಜಲ್ಸದಲ್ಲಿ ಏಳುನೂರು ಜನರು ಭಾಗವಹಿಸಿದ್ದರು. ಆಗ ಅಲ್ಲಿ ಊಟದ ವ್ಯವಸ್ಥೆಯಲ್ಲಿ ಕೊರತೆ ಉಂಟಾಯಿತು. ರಾತ್ರಿ ಮೂರು ಗಂಟೆಯ ತನಕ ಕೆಲವರಿಗೆ ಊಟ ಸಿಗಲಿಲ್ಲ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಲ್‌ಹಾಮ್ ಅವತೀರ್ಣವಾಯಿತು: **ಯಾ ಅಯ್ಯುಹನ್ನಬಿಯ್ಯು ಅತಿಇಮುಲ್ ಜಾಇಯ ವಲ್ ಮುಅ್‌ತರ್ರ.** 'ಓ ನಬಿ, ಹಸಿವೆಯಿಂದಿರುವವರಿಗೂ ಗಾಬರಿಗೊಂಡವರಿಗೂ ಆಹಾರ ನೀಡು' ಜನರಿಗೆ ರಾತ್ರಿ ಆಹಾರ ಲಭಿಸದುದು ತಿಳಿದಾಗ ಹೊಸದಾಗಿ ಆಹಾರ ಸಿದ್ಧಪಡಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಜ್ಞಾಪಿಸಿದರು.

ಒಂದು ಕಾಲದಲ್ಲಿ ಏಳುನೂರು ಜನರಿಗೆ ಆಹಾರ ವ್ಯವಸ್ಥೆ ಮಾಡಲು ಸಹ ಕಷ್ಟವಾಗಿತ್ತು. ಈಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ನೀಡುತ್ತಿರುವ ಸಹಾಯದ ದೃಶ್ಯಗಳನ್ನು ನೋಡಿರಿ. ವಿವಿಧ ಜನಾಂಗಗಳ ಸಾವಿರಾರು ಜನರು ಈಗ ಖಾದಿಯಾನಿನಲ್ಲಿ ಜಮಾಯಿಸಿದ್ದಾರೆ. ಅವರಿಗೆ ಆಹಾರ ಸಿದ್ಧಪಡಿಸಲಾಗುತ್ತಿದೆ. ಅವರ ಆವಶ್ಯಕತೆಗಳಿಗನುಸಾರವಾಗಿ ಅತಿಥಿ ಸತ್ಕಾರ ವ್ಯವಸ್ಥೆ ಮಾಡಲಾಗುತ್ತಿದೆ. ಲೋಕದ ಇತರ ದೇಶಗಳಲ್ಲಿ ಜರಗುವ ಜಲ್ಸಗಳಲ್ಲೂ ಇದೇ ರೀತಿ ವ್ಯವಸ್ಥೆ ಮಾಡಲಾಗುತ್ತಿದೆ.

ಇದು ಅಲ್ಲಾಹನ ಸಹಾಯದ ಮತ್ತು ಬೆಂಬಲದ ಅತಿ ಮಹತ್ತರವಾದ ದೃಷ್ಟಾಂತವಾಗಿದೆ. ಯಾವ ಜಮಾಅತ್‌ನೊಂದಿಗೆ ಅಲ್ಲಾಹನ ಸಹಾಯವಿರುತ್ತದೆಯೋ ಅದು ಇದೇ ರೀತಿ ಅಭಿವೃದ್ಧಿ ಹೊಂದುತ್ತಾ ಇರುತ್ತದೆ. ಶತ್ರುಗಳ ದೃಷ್ಟಿಯಲ್ಲಿ ಅದು ಮುಳ್ಳಿನ ಹಾಗೆ ಚುಚ್ಚಲು ತೊಡಗುತ್ತದೆ. ಶತ್ರುಗಳು ಶತ್ರುತ್ವದಲ್ಲಿ ವೃದ್ಧಿ ಹೊಂದುತ್ತಾರೆ. ಅವರ ಅಸೂಯೆ ವರ್ಧಿಸುತ್ತದೆ. ಆದರೆ ಅಲ್ಲಾಹನ ವಿಧಿ ನಿರ್ಣಯ ಈಡೇರದಿರುವುದಿಲ್ಲ. ಶತ್ರುಗಳು ಅಸೂಯೆಯ ದೃಷ್ಟಿ ಬೀರುತ್ತಾ ಇದ್ದರೂ ಅಲ್ಲಾಹನು ತನ್ನ ಜಮಾಅತನ್ನು ವರ್ಧಿಸುತ್ತಾ ಇರುತ್ತಾನೆ. ಇದು ನಮಗೆ ಬಹಳ ಸಂತೋಷಕರವಾದುದು ಎಂಬುದರ ಬಗ್ಗೆ ಸಂಶಯವಿಲ್ಲ. ಆದರೆ ಇದು ಅದರೊಂದಿಗೆ ನಮ್ಮ ಹೊಣೆಗಾರಿಕೆಗಳ ಬಗ್ಗೆ ಸಹ ನಮ್ಮ ಶ್ರದ್ಧೆ ಸೆಳೆಯುತ್ತದೆ. ನಾವು ಯಾವ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ್ದೇವೋ ಆ ಉದ್ದೇಶ ಲಕ್ಷ್ಯಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ನೀವು ನೋಡಿರಿ ಹಿಂದೂಸ್ತಾನ ಮತ್ತು ಪಾಕಿಸ್ತಾನದಲ್ಲಿ ಮಾತ್ರವಲ್ಲ ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ಈ ಜಮಾಅತ್ ವರ್ಧಿಸುತ್ತಾ ಇದೆ. ಅಲ್ಲಾಹನ ವಿಧಿನಿರ್ಣಯ

ಯಾವ ತೀರ್ಮಾಣ ಮಾಡಿದೆಯೋ ಅದು ಜಯಶಾಲಿಯಾಗಬೇಕಾಗಿದೆ – ಇನ್‌ಶಾಅಲ್ಲಾಹ್. ಜಮಾಅತ್ ಅಭಿವೃದ್ಧಿ ಹೊಂದುತ್ತಾ ಇದೆ. ಅದು ಇನ್‌ಶಾಅಲ್ಲಾಹ್ ಅಭಿವೃದ್ಧಿ ಹೊಂದುತ್ತಾ ಮುಂದೆ ಸಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಇಲ್‌ಹಾಮ್ ಅರ್ಥಗರ್ಭಿತವಾಗಿದೆ. ಅದರ ಅರ್ಥ ಏನೆಂದು ಸ್ಪಷ್ಟವಾಗಿ ಹೇಳಲಾರೆವು. ಅದು ಯಾವಾಗ ಹೇಗೆ ಈಡೇರುವುದು ಎಂದು ನಮಗೆ ತಿಳಿಯದು. ಆ ಇಲ್‌ಹಾಮ್ ಹೀಗಿದೆ: **"ಲಂಗರ್ ಉಠಾದೋ".** ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಇದು ನೌಕೆಗಳಿಗೆ ಸಂಬಂಧಿಸಿದ ಲಂಗರ್ ಎಂದು ಅರ್ಥ ಮಾಡಿದರೆ, ನೌಕೆಗಳು ಚಲಿಸದಂತೆ ನೀರಿನಲ್ಲಿ ಹಾಕುವ ಲಂಗರ್ ಎಂಬ ಅರ್ಥ ಇದಕ್ಕಿದ್ದರೆ, ಇದು ಸೂಚಿಸುವುದು ಅಲ್ಲಾಹನ ಸಂದೇಶ ಎಲ್ಲ ಕಡೆಗೆ ತಲಪಿಸಲು ಹೊರಡಿರಿ ಎಂದಾಗಿದೆ. ಲಂಗರ್ ಎಂಬ ಪದದ ಅರ್ಥ ಭೋಜನ ಶಾಲೆ ಎಂದಾರೆ ಇದರ ಅರ್ಥ ಹೀಗಾಗುತ್ತದೆ. ಆಗಮಿಸುವವರ ಸಂಖ್ಯೆ ಎಷ್ಟು ಹೆಚ್ಚಾಗುವುದೆಂದರೆ ಲಂಗರ್ ವ್ಯವಸ್ಥೆ ಮಾಡಲು ಸಾಧ್ಯವಾಗಲಾರದು. ಆದುದರಿಂದ ಲಂಗರ್ ವ್ಯವಸ್ಥೆ ಕೊನೆಗೊಳಿಸಿ ಜನರಿಗೆ ಹೇಳಬೇಕು– ವಾಸ್ತವ್ಯ ಮತ್ತು ಊಟದ ವ್ಯವಸ್ಥೆ ಸ್ವತಃ ನೀವೇ ಮಾಡಿಕೊಳ್ಳಿರಿ ಎಂದು. ಈ ಎರಡು ಅರ್ಥಗಳಲ್ಲಿ ನಾವು ಯಾವುದಾದರೊಂದು ಅರ್ಥವನ್ನು ನಿರ್ಧರಿಸಲಾರೆವು. ಮತ್ತು ಅದು ಜಾರಿಯಾಗುವ ಕಾಲವನ್ನು ಸಹ ನಾವು ನಿಗದಿ ಪಡಿಸಲಾರೆವು.

ಅತಿಥಿಗಳ ವಾಸ ವ್ಯವಸ್ಥೆ ಮಾಡಲು ನಮಗೆ ಸಾಧ್ಯವಿರುವ ತನಕ ನಮಗೆ ಇರುವ ಮಾರ್ಗದರ್ಶನ **'ವಸ್ಸಿಅ್ ಮಕಾನಕ'** ನಿನ್ನ ಮನೆಯನ್ನು ವಿಶಾಲಗೊಳಿಸು ಎಂದೇ ಆಗಿದೆ. ಆದುದರಿಂದ ಕನಿಷ್ಠ ಪಕ್ಷ ಖಾದಿಯಾನ್‌ನಲ್ಲಿ ಮತ್ತು ಸಾಧ್ಯವಿರುವ ಬೇರೆ ಜಮಾಅತುಗಳಲ್ಲಿ ಅತಿಥಿಗಳಿಗೆ ತಾತ್ಕಾಲಿಕ ಮತ್ತು ಸ್ಥಿರವ್ಯವಸ್ಥೆ ಮಾಡಬೇಕು. ಖಾದಿಯಾನ್‌ನಲ್ಲಿ ಸಹ ಈಗ ಅಲ್ಲಾಹನ ಅನುಗ್ರಹದಿಂದ ಬಹಳ ವಿಶಾಲ ವ್ಯವಸ್ಥೆ ಆಗುತ್ತಿದೆ. ಹೊಸ ಹೊಸ ಗೆಸ್ಟ್ ಹೌಸ್‌ಗಳು ಮತ್ತು ವಾಸ ಸ್ಥಳಗಳು ನಿರ್ಮಿತವಾಗಿವೆ. ಅತಿಥಿಗಳಿಗೆ ಸಾಧ್ಯವಿರುವಷ್ಟು ಸೌಲಭ್ಯ ವ್ಯವಸ್ಥೆಗೊಳಿಸಲಾಗುತ್ತಿದೆ. ಹೀಗಿದ್ದರೂ ಮನೆಯಲ್ಲಿ ಸಿಗುವಂತಹ ಸೌಲಭ್ಯ ದೊರಕಲಾರದು. ಆದುದರಿಂದ ಅತಿಥಿಗಳು ಸಹ ತಮಗೆ ದೊರೆತ ಅನುಕೂಲತೆಗಳಿಗೋಸ್ಕರ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಜಲ್ಸಕ್ಕೆ ಆಗಮಿಸಲು ಕಾರಣವಾದ ಮುಖ್ಯ ಉದ್ದೇಶ ಈಡೇರಿಸಬೇಕು. ಕೇವಲ ಅತಿಥಿ ಸತ್ಕಾರ ಮತ್ತು ವಾಸ್ತವ್ಯದ ಅನುಕೂಲತೆಗಳ ಕಡೆಗೆ ನೋಡಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಇಲ್‌ಹಾಮ್ ಮತ್ತು ಅವರ ಇಚ್ಛೆಯ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಜಲ್ಸಕ್ಕೆ ಆಗಮಿಸಲು ಯಾರಿಗೆಲ್ಲ ಸಾಧ್ಯವಿದೆಯೋ ಅವರೆಲ್ಲಾ ಇಲ್ಲಿಗೆ ಬಂದು ಜಮಾಯಿಸಬೇಕು ಎಂಬುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗ್ರಹವಾಗಿತ್ತು. ಅಲ್ಲಾಹನ ಝಿಕ್ರ್ ಆಲಿಸಲು ಮತ್ತು ಆಲಿಸುವಂತೆ ಮಾಡಲು ಇಲ್ಲಿಗೆ ಬಂದು ಸೇರಬೇಕು ಎಂಬುದಾಗಿತ್ತು. ಇಂದು ನಾವು ನೋಡುತ್ತೇವೆ ಅಲ್ಲಾಹನ ಅನುಗ್ರಹದಿಂದ ಲೋಕದ ಅನೇಕ ದೇಶಗಳಿಂದ ಜನರು ಖಾದಿಯಾನಿಗೆ ತಲಪುತ್ತಿದ್ದಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಮ್ಮ ಜಮಾಅತಿನ ಬಹಳ ದೊಡ್ಡ ಭಾಗ ಹಿಂದೂಸ್ಥಾನದಲ್ಲಿದೆ (ಈಗಿನ ಭಾರತ ಮತ್ತು ಪಾಕಿಸ್ತಾನ ಸೇರಿ). ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಖಾದಿಯಾನಿಗೆ ಬರಬಹುದಾಗಿದೆ. ನಿವಾರಿಸಬಹುದಾದ ಯಾವುದಾದರೂ ಅಡಚಣೆಯ ಕಾರಣದಿಂದ ಜಲ್ಸಕ್ಕೆ ಆಗಮಿಸುವುದಿಲ್ಲವಾದರೆ ಅದು ಒಂದು ಆಜ್ಞೆಯ ಉಲ್ಲಂಘನೆ ಮಾತ್ರವಲ್ಲ ತಮ್ಮ ಮಕ್ಕಳ ಮೇಲೆ ಮಾಡುವ ದೌರ್ಜನ್ಯವೂ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸಕ್ಕೆ ಬನ್ನಿರಿ ಎಂದು ಆಜ್ಞಾಪಿಸಿದ್ದಾರೆ. ಆದುದರಿಂದ ಜಲ್ಸಕ್ಕೆ ಆಗಮಿಸದವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಜ್ಞೆಯನ್ನು ಅನುಸರಿಸುವುದಿಲ್ಲ ಮಾತ್ರವಲ್ಲ ತಮ್ಮ ಮಕ್ಕಳ ಮೇಲೆ ಸಹ ದೌರ್ಜನ್ಯ ಮಾಡುತ್ತಾರೆ.

ಆದುದರಿಂದ ಹಿಂದೂಸ್ಥಾನದ ಅಹ್ಮದಿಯರು ಖಾದಿಯಾನಿಗೆ ಬರಲು ವಿಶಿಷ್ಟವಾಗಿ ಪ್ರಯತ್ನಿಸಬೇಕು. ಅಮೇರಿಕದ ಶ್ರೀಮಂತ ಅಹ್ಮದಿಯರು ಪ್ರಯಾಣದ ಖರ್ಚು ಮಾಡಲು ಸಾಮರ್ಥ್ಯವುಳ್ಳವರಾದರೆ ಅವರು ಹಜ್‌ಗೆ ಹೋಗಬೇಕು ಮಾತ್ರವಲ್ಲ ಜೀವಿತದಲ್ಲಿ ಒಂದೆರಡು ಸಲವಾದರೂ ಜಲ್ಸ ಸಾಲಾನದಲ್ಲಿ ಭಾಗವಹಿಸಲು ಖಾದಿಯಾನಿಗೆ ಹೋಗಬೇಕು. ಏಕೆಂದರೆ ಖಾದಿಯಾನ್‌ನಲ್ಲಿ ಜ್ಞಾನ ಸಂಬಂಧವಾದ ಅನುಗ್ರಹಗಳು ಮತ್ತು ಕೇಂದ್ರದ ಅನುಗ್ರಹಗಳು ದೊರಕುತ್ತವೆ. ಈಗ ಅಲ್ಲಿ ಖಿಲಾಫತ್ ಆಸ್ಥಾನವಿಲ್ಲದಿದ್ದರೂ ಅಲ್ಲಿಂದ ಒಂದು ಆಧ್ಯಾತ್ಮಿಕ ಪ್ರಭಾವ ದೊರಕುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ದೂರ ದೂರದ ದೇಶಗಳಿಂದ ಖಾದಿಯಾನಿಗೆ ಜನರು ಆಗಮಿಸುವರೆಂದು ನಾನು ದೃಢವಾಗಿ ನಂಬುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಸ್ವಪ್ನದಲ್ಲಿ ಹೀಗೆ ಕಂಡರು: ಅವರು ಗಾಳಿಯಲ್ಲಿ ತೇಲುತ್ತಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಹಝ್ರತ್ ಈಸಾ ಅಲೈಹಿಸ್ಸಲಾಮ್ ನೀರಿನ ಮೇಲೆ ನಡೆಯುತ್ತಿದ್ದರು. ನಾನು ಗಾಳಿಯಲ್ಲಿ ಈಜಾಡುತ್ತಿದ್ದೇನೆ. ನನಗೆ ಅಲ್ಲಾಹನಿಂದ ಅವರಿಗಿಂತ ಹೆಚ್ಚು ಅನುಗ್ರಹ ನೀಡಲಾಗಿದೆ." ಈ ಸ್ವಪ್ನದ ಪ್ರಕಾರ ನಾನು ಭಾವಿಸುವುದೇನೆಂದರೆ, ಒಂದು ಕಾಲದಲ್ಲಿ ಖಾದಿಯಾನಿನ ಜಲ್ಸದ ಕಾಲದಲ್ಲಿ ಎಕ್ಕ ಬಂಡಿಗಳ ಓಡಾಟದಿಂದ ಮಾರ್ಗಗಳು ಸವೆದು ಹೋಗುತ್ತಿದ್ದುವು. ಅನಂತರ ಮೋಟಾರು ಬಂಡಿಗಳು ಚಲಿಸಿ ಮಾರ್ಗಗಳಲ್ಲಿ ಹೊಂಡಗಳಾಗುತ್ತಿದ್ದುವು. ಈಗ ರೈಲು ಬಂಡಿಗಳಲ್ಲಿ ಜನರು ಗುಂಪು ಗುಂಪಾಗಿ ಆಗಮಿಸುತ್ತಿದ್ದಾರೆ. ಒಂದು ಕಾಲ ಬರುವುದು ಆಗ ಇಂತಿಂತಹ ದೇಶದಿಂದ ಇಷ್ಟು ವಿಮಾನಗಳಲ್ಲಿ ಜನರು ಬಂದರು ಎಂದು ಆಗಾಗ ಪ್ರಕಟಣೆಗಳು ಮೊಳಗುವವು. ಈ ಮಾತು ಲೋಕದ ದೃಷ್ಟಿಯಲ್ಲಿ ವಿಚಿತ್ರವಾಗಿ ಕಾಣಬಹುದು. ಆದರೆ ಅಲ್ಲಾಹನ ದೃಷ್ಟಿಯಲ್ಲಿ ಇದು ವಿಚಿತ್ರವಾಗಿರುವುದಿಲ್ಲ.

ಈಗ ನಾವು ಈ ದೃಶ್ಯಗಳನ್ನು ಕಾಣುತ್ತಾ ಇದ್ದೇವೆ. ನಾನು ಇಪ್ಪತ್ತು ಇಪ್ಪತ್ತೈದು ವಿದೇಶಗಳ ಜನರು ಖಾದಿಯಾನಿಗೆ ಆಗಮಿಸಿದ ಬಗ್ಗೆ ಹೇಳಿದೆನು. ಅವರು ವಿಮಾನಗಳಲ್ಲಿ ಸಂಚಾರ ಮಾಡಿ ಅಲ್ಲಿಗೆ ಆಗಮಿಸಿದ್ದಾರೆ. ಕೆಲವರು ಎಂತಹ ದೇಶಗಳ ನಿವಾಸಿಗಳಾಗಿದ್ದಾರೆಂದರೆ ಅವರು ಅಲ್ಲಿಗೆ ಬರುವರೆಂದು ಊಹಿಸಲು ಸಹ ಸಾಧ್ಯವಿರಲಿಲ್ಲ. ಖಾದಿಯಾನಿನ ಜಲ್ಸದಲ್ಲಿ ಭಾಗವಹಿಸಲು ಚಾರ್ಟರ್ಡ್ ವಿಮಾನ ಮೂಲಕ ಜನರು ಆಗಮಿಸುವ ಕಾಲವೂ ದೂರವಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಅಲ್ಲಾಹನು ನಿರ್ಧರಿಸಿದ್ದಾನೆ. ಮಕ್ಕ ಮತ್ತು ಮದೀನದ ನಂತರ ಖಾದಿಯಾನನ್ನು ತನ್ನ ಧರ್ಮದ ಕೇಂದ್ರವನ್ನಾಗಿ ಮಾಡಲು ತೀರ್ಮಾನಿಸಿದ್ದಾನೆ. ಮಕ್ಕ ಮತ್ತು ಮದೀನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸಂಬಂಧ ಹೊಂದಿದೆ. ಅವರು ಇಸ್ಲಾಮ್ ಧರ್ಮದ

ಸ್ಥಾಪಕರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಯಜಮಾನರೂ ಶಿಕ್ಷಕರೂ ಆಗಿದ್ದಾರೆ. ಈ ಕಾರಣದಿಂದ ಈ ಎರಡು ನಗರಗಳಿಗೆ ಖಾದಿಯಾನಿನ ಮೇಲೆ ಅಗ್ರ ಸ್ಥಾನವಿದೆ. ಮಕ್ಕ ಮತ್ತು ಮದೀನದ ನಂತರ ಅಲ್ಲಾಹನು ಲೋಕಕ್ಕೆ ಮಾರ್ಗದರ್ಶನ ನೀಡುವ ಕೇಂದ್ರವಾಗಿ ಮಾಡಿರುವುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿ ಬಿಂಬವಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಗರವನ್ನಾಗಿದೆ. ಅದು ಈಗ ಧರ್ಮ ಪ್ರಚಾರದ ಏಕಮಾತ್ರ ಕೇಂದ್ರವಾಗಿದೆ. ಮಕ್ಕ ಮತ್ತು ಮದೀನ ಅನುಗ್ರಹ ಭರಿತ ಸ್ಥಳವಾಗಿರುವುದರ ಜೊತೆಗೆ ಧರ್ಮ ಪ್ರಚಾರದ ಕೇಂದ್ರಗಳೂ ಆಗಿದ್ದುವು. ಆದರೆ ಈಗ ಅಲ್ಲಿನ ನಿವಾಸಿಗಳು ತಮ್ಮ ಹೊಣೆಗಾರಿಕೆಯನ್ನು ಮರೆತುಬಿಟ್ಟಿರುವರು. ಆದರೆ ಈ ಸ್ಥಿತಿ ಯಾವಾಗಲೂ ಮುಂದುವರಿಯಲಾರದು. ಇನ್‌ಶಾಅಲ್ಲಾಹ್– ನನಗೆ ದೃಢ ನಂಬಿಕೆ ಇದೆ, ಅಲ್ಲಾಹನು ಈ ಅರಬ್ ದೇಶಗಳಲ್ಲಿ ಅಹ್ಮದಿಯ್ಯತ್ತನ್ನು ಸ್ಥಾಪಿಸುವನು. ಆಗ ಮಕ್ಕ ಮತ್ತು ಮದೀನ ತಮ್ಮ ಮೂಲ ವೈಭವಗಳಿಗೆ ಮರಳುವುದು.

ಬಹಳ ಮುಖ್ಯವಾದ ಮತ್ತೊಂದು ಉಪದೇಶವಿದೆ. ಅದು ಗಮನಾರ್ಹವಾಗಿದೆ. ಜಲ್ಸದಲ್ಲಿ ಸೇರಿ ಖಾದಿಯಾನಿನಲ್ಲಿ ಕುಳಿತಿರುವವರಿಗೂ ಇತರ ಸ್ಥಳಗಳಲ್ಲಿ ಆಲಿಸುವವರಿಗೂ ಸಹ ಇದರಲ್ಲಿ ಪಾಠವಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹೂವು ಇರುವಲ್ಲಿ ಮುಳ್ಳು ಸಹ ಇರುತ್ತದೆ. ಅದೇ ರೀತಿ ಅಭಿವೃದ್ಧಿಯೊಂದಿಗೆ ಅಸೂಯೆ ಮತ್ತು ದ್ವೇಷ ಸಹ ಇರುತ್ತದೆ. ಅಭಿವೃದ್ಧಿಯೊಂದಿಗೆ ಅವನತಿಯೂ ಇರುತ್ತದೆ. ಒಳ್ಳೆಯದನ್ನು ಗಳಿಸುವ ದಾರಿಯಲ್ಲಿ ವಿರೋಧಿಸುವ ಶಕ್ತಿಗಳು ಸಹ ಇರುತ್ತವೆ. ಅವುಗಳಿಂದ ಕೆಲವು ಪರೀಕ್ಷೆಗಳು ಸಹ ಸಂಭವಿಸುತ್ತವೆ. ಆಗ ಬಲಹೀನ ಮತ್ತು ಅಪಕ್ವ ವಿಶ್ವಾಸಿಗಳು ಮುರ್‌ತದ್ (ಧರ್ಮತ್ಯಾಗಿ) ಆಗುತ್ತಾರೆ. ಕೆಲವು ಸಾರಿ ಚಿಕ್ಕ ಪುಟ್ಟ ಕಷ್ಟಗಳು ಸಂಭವಿಸುತ್ತವೆ. ಆಗ ಕೆಲವು ಬಲಹೀನ ವಿಶ್ವಾಸಿಗಳು ದಾರಿ ತಪ್ಪುತ್ತಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಜಲ್ಸದಲ್ಲಿ ಭಾಗವಹಿಸುವವರಿಗೆ ಹೀಗೆ ಉಪದೇಶ ನೀಡಿದ್ದಾರೆ. ಬಹಳ ಜನರು ಆಗಮಿಸಿದ ಕಾರಣ ಮತ್ತು ಕಾರ್ಯಕರ್ತರ ಕೊರತೆಯ ಕಾರಣ ನಿಮಗೆ ಏನಾದರೂ ತೊಂದರೆ ಉಂಟಾದರೆ ನೀವು ಗಾಬರಿಗೊಂಡು ದಾರಿತಪ್ಪಿ ಹೋಗಬಾರದು. ಈ ಉಪದೇಶವನ್ನು ಯಾವಾಗಲೂ ನೆನಪಿಟ್ಟುಕೊಳ್ಳಬೇಕು. ಇಲ್ಲಿಗೆ ಜಲ್ಸಕ್ಕೆ ಬಂದವರು ಮತ್ತು ಬೇರೆ ಕಡೆಗಳಲ್ಲಿ ಜಲ್ಸದ ಸಂದರ್ಭಗಳಲ್ಲೂ.

ಅತಿಥಿ ಸತ್ಕಾರ ಮಾಡಲು ನಿಯುಕ್ತರಾದವರು ಅತಿಥಿಗಳನ್ನು ಸತ್ಕರಿಸಲು ಪೂರ್ಣವಾಗಿ ಪ್ರಯತ್ನ ಮಾಡುತ್ತಾರೆ. ಆದರೂ ಕೆಲವು ಕುಂದು ಕೊರತೆಗಳು ಸಂಭವಿಸುತ್ತವೆ. ನಾನು ಖಾದಿಯಾನಿಗೆ ಆಗಮಿಸಿದವರೊಂದಿಗೆ ಮತ್ತು ಬೇರೆ ಎಲ್ಲಿಯಾದರೂ ಜಲ್ಸಕ್ಕೆ ಹೋಗುವವರೊಂದಿಗೆ ಹೇಳಲು ಬಯಸುತ್ತೇನೆ. ನೀವು ನೆನಪಿಟ್ಟುಕೊಳ್ಳಿರಿ. ನಿಮಗೆ ವ್ಯವಸ್ಥೆಯ ಕಾರಣ ಯಾವುದಾದರೂ ಕಷ್ಟ ಉಂಟಾದರೆ ಸಂತೋಷದಿಂದ ಅದನ್ನು ಸಹಿಸಿರಿ. ಅದನ್ನು ನಿಮ್ಮ ವಿಶ್ವಾಸಕ್ಕೆ ಭಂಗವುಂಟಾಗುವಂತೆ ಮಾಡಬೇಡಿರಿ. ಅಲ್ಲಾಹನು ಖಾದಿಯಾನಿನ ಜಲ್ಸ ಮತ್ತು ಇತರ ಎಲ್ಲ ಜಲ್ಸಗಳನ್ನು ತನ್ನ ಅನುಗ್ರಹಗಳಿಂದ ತುಂಬಲಿ. ಎಲ್ಲ ಜಲ್ಸಗಳೂ ಅಲ್ಲಾಹನ ಅನುಗ್ರಹಗಳನ್ನು ಬಾಚಿಕೊಳ್ಳುವಂತಹದಾಗಲಿ. ಜಲ್ಸದಲ್ಲಿ ಭಾಗವಹಿಸುವ ಎಲ್ಲರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳ ವಾರೀಸುದಾರರಾಗಲಿ. ಈ ದಿನಗಳಲ್ಲಿ ಬಹಳ ಹೆಚ್ಚು ಪ್ರಾರ್ಥನೆಗಳನ್ನು ಮಾಡಿರಿ.

——————————*****——————————

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 25-12-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon